/689050

ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1498
ಸದಸ್ಯರ ಹೆಸರು : ಶ್ರೀ ಕುಶಲಪ್ಪ ಎಂ.ಪಿ
ವಿಷಯ : ಇ-ಆಡಳಿತ ಸರಳೀಕರಣ ಕುರಿತು.
ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಗಳು
ಉತ್ತರಿಸುವ ದಿನಾಂಕ : 10-03-2022

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಸರ್ಕಾರ ಇ-ಆಡಳಿತ ಪ್ರಾರಂಭಿಸಿದ್ದರೂ, ಇತ್ತೀಚಿನ ದಿನಗಳಲ್ಲಿ ಸಚಿವಾಲಯದಲ್ಲಿ ಕೆಲ ಅಧಿಕಾರಿಗಳು ಹಾಗೂ ವಿಷಯ ನಿರ್ವಹಕರುಗಳು ಮಾನ್ಯ ಶಾಸಕರುಗಳ ಆಪ್ತ ಸಹಾಯಕರಿಗೆ ಕಡತಗಳ ಸ್ಥಿತಿಗತಿ ಕುರಿತು ಮಾಹಿತಿ ನೀಡಲು ತೊಂದರೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ವಿವರ ಒದಗಿಸುವುದು.	ಹೌದು ಕಡತಗಳ ಹಾಗೂ ಪತ್ರಗಳ ಚಲನವಲನಗಳ ಮಾಹಿತಿ ತಿಳಿಯಲು ನೂತನ Citizen portal ಅಭಿವೃದ್ಧಿ ಪಡಿಸಲು ಸರ್ಕಾರವು ಕ್ರಮ ಕೈಗೊಳ್ಳುತ್ತಿದೆ. ಈ Citizen portal ಬಳಸಿ ಸಾರ್ವಜನಿಕರು ಮತ್ತು ಮಾನ್ಯ ಶಾಸಕರುಗಳ ಆಪ್ತ ಸಹಾಯಕರುಗಳು ಕಡತ ಹಾಗೂ ಪತ್ರಗಳ ಚಲನವಲನ ಮಾಹಿತಿ ಪಡೆಯ ಬಹುದಾಗಿರುತ್ತದೆ.
ಆ)	ಈ ತರಹದ ಕಡತಗಳನು ವಿಲೇವಾರಿ ಮಾಡಲು ಅಧಿಕಾರಿಗಳಿಗೆ ನಿಗಧಿಪಡಿಸಿರುವ ಕಾಲಮಿತಿ ಎಷ್ಟು; ನಿಗಧಿತ ಕಾಲಮಿತಿ ಒಳಗೆ ವಿಲೇವಾರಿ ಮಾಡದ ಅಧಿಕಾರಿ/ನೌಕರರ ವಿರುದ್ಧ ಕೈಗೊಳ್ಳುವ ಕ್ರಮವೇನು (ವಿವರ ನೀಡುವುದು)	ಸಚಿವಾಲಯ ಕೈಪಿಡಿಯಲ್ಲಿ ನಿಗದಿಪಡಿಸಿರುವ ಕಾಲಮಿತಿಯನ್ವಯ ಕಡತಗಳನು 05 ದಿನಗಳಲ್ಲಿ ವಿಲೇವಾರಿ ಮಾಡಲಾಗುತ್ತಿದೆ. ನಿಗದಿತ ಕಾಲಮಿತಿಯೊಳಗೆ ವಿಲೇವಾರಿ ಮಾಡದ ಅಧಿಕಾರಿ / ನೌಕರರ ವಿರುದ್ಧ ಆಯಾ ಇಲಾಖೆಗಳಲ್ಲಿ ನೋಟೀಸ್ ನೀಡಿ ಶಿಸ್ತು ಕ್ರಮ ಕೈಗೊಳ್ಳಲಾಗುತ್ತಿದೆ.
ಇ)	ಶಾಸಕರ ಆಪ್ತ ಸಹಾಯಕರಿಗೆ ಅವರು ಕೇಳುವ ಕಡತಗಳ ಮಾಹಿತಿ ನೀಡುವಂತೆ ಸೂಚನೆ ನೀಡಲಾಗುವುದೆ?(ವಿವರ ನೀಡುವುದು)	ಮಾಹಿತಿ ನೀಡುವಂತೆ ಕೋರಿ ಪತ್ರಗಳು ಸ್ವೀಕೃತವಾಗಿದ್ದಲ್ಲಿ, ಮಾಹಿತಿಯನ್ನು ನೀಡಲಾಗುತ್ತಿದೆ.

ಕಡತ ಸಂಖ್ಯೆ: ಸಿಆಸುಇ 41 ಪಿಆರ್‌ಜೆ 2022

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ